# ಸಂಶೋಧನೆ ಮತ್ತು ಅಭಿವೃದ್ಧಿ ಉಪಕರ ಅಧಿನಿಯಮ, 1986

**06.10.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 34.ನೇ ಸಂಪುಟದ 1ನೇ ಸಂಚಿಕೆಯಲ್ಲಿ 76 ರಿಂದ 78ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಆರಂಭ

2. ಪರಿಭಾಷೆಗಳು

3. ತಂತ್ರಜ್ಞಾನದ ಆಮದಿನ ಸಂಬಂಧದಲ್ಲಿ ಮಾಡಿದ ಸಂದಾಯದ ಮೇಲೆ ಉಪಕರವನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು

4. ಉಪಕರದಿಂದ ಬಂದ ಉತ್ಪತ್ತಿಯನ್ನು ಭಾರತದ ಸಂಚಿತ ನಿಧಿಗೆ ಜಮೆ ಮಾಡುವುದು

5-6. [ಬಿಟ್ಟುಬಿಡಲಾಗಿದೆ]

7. ವಿನಾಯಿತಿ ನೀಡಲು ಕೇಂದ್ರ ಸರ್ಕಾರದ ಅಧಿಕಾರ

8. ಮಾಹಿತಿಯನ್ನು ತರಿಸಿಕೊಳ್ಳಲು ಅಧಿಕಾರ

9. ಉಪಕರವನ್ನು ಸಂದಾಯ ಮಾಡದೇ ಇರುವುದಕ್ಕೆ ದಂಡ

10. ನಿಯಮ ರಚನಾಧಿಕಾರ.

# ಸಂಶೋಧನೆ ಮತ್ತು ಅಭಿವೃದ್ಧಿ ಉಪಕರ ಅಧಿನಿಯಮ, 1986

(1986ರ ಅಧಿನಿಯಮ ಸಂಖ್ಯೆ 32)

[ಆಗಸ್ಟ್ 14, 1986]

ದೇಶದಲ್ಲಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನವನ್ನು ವಾಣಿಜ್ಯದ ಉದ್ದೇಶಕ್ಕಾಗಿ ಉಪಯೋಗಿಸುವುದನ್ನು ಪ್ರೋತ್ಸಾಹಿಸುವ ಮತ್ತು ಆಮದು ಮಾಡಿಕೊಳ್ಳಲಾದ ತಂತ್ರಜ್ಞಾನವನ್ನು ದೇಶದಲ್ಲಿ ವ್ಯಾಪಕ ಪ್ರಮಾಣದಲ್ಲಿ ಉಪಯೋಗಿಸಲು ಅಳವಡಿಸಿಕೊಳ್ಳುವ ಉದ್ದೇಶಕ್ಕಾಗಿ ಆಮದು ಮಾಡಿಕೊಳ್ಳಲಾದ ತಂತ್ರಜ್ಞಾನದ ಸಂಬಂಧದಲ್ಲಿ ಮಾಡಲಾದ ಎಲ್ಲ ಸಂದಾಯಗಳ ಮೇಲೆ ಉಪಕರವನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೇಳನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತ ವಾಗತಕ್ಕದ್ದು: -

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಆರಂಭ.**- (1) ಈ ಅಧಿನಿಯಮವನ್ನು ಸಂಶೋಧನೆ ಮತ್ತು ಅಭಿವೃದ್ಧಿ ಉಪಕರ ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು* ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,-

(ಎ) "ಮಂಡಲಿ" ಎಂದರೆ ತಾಂತ್ರಿಕ ಅಭಿವೃದ್ಧಿ ಮಂಡಲಿ ಅಧಿನಿಯಮ, 1995ರ ಮೇರೆಗೆ ರಚಿತವಾದ ತಾಂತ್ರಿಕ ಅಭಿವೃದ್ಧಿ ಮಂಡಲಿ;

(ಬಿ) "ಉಪಕರ" ಎಂದರೆ 3ನೇ ಪ್ರಕರಣದ ಮೇರೆಗೆ ವಿಧಿಸಲಾಗುವ ಉಪಕರ;

(ಸಿ) [ * * * ]

(ಡಿ) ಯಾವುದೇ ತಂತ್ರಜ್ಞಾನದ ಸಂಬಂಧದಲ್ಲಿ, " ಆಮದು " ಎಂದರೆ ಭಾರತದ ಹೊರಗಿನ ಯಾವುದೇ ಸ್ಥಳದಿಂದ, ಭಾರತದ ಒಳಗೆ ತಂತ್ರಜ್ಞಾನವನ್ನು ತರುವುದು;

(ಇ) "ಕೈಗಾರಿಕಾ ಸಂಸ್ಥೆ" ಎಂಬ ಪದವು ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1964ರ (1964ರ 18) 2ನೇ ಪ್ರಕರಣದ (ಸಿ) ಖಂಡದಲ್ಲಿ ಅದಕ್ಕೆ ಗೊತ್ತುಪಡಿಸಲಾದ ಅರ್ಥವನ್ನು ಹೊಂದಿರತಕ್ಕದ್ದು ಮತ್ತು ಅದರಲ್ಲಿ, ಯಾವ ವ್ಯಕ್ತಿಯ ಪರವಾಗಿ ತಂತ್ರಜ್ಞಾನದ ಆಮದನ್ನು ಒಳಗೊಂಡಿರುವ ವಿದೇಶೀ ಸಹಯೋಗವು ಕಾಲಕಾಲಕ್ಕೆ ಜಾರಿಯಲ್ಲಿರುವ, ಭಾರತ ಸರ್ಕಾರದ ಕೈಗಾರಿಕಾ ನೀತಿಗನುಗುಣವಾಗಿ ಅನುಮೋದಿತವಾಗಿದೆಯೋ ಅಥವಾ ತಂತಾನೆ ಅನುಮೋದಿತವಾಗಿದೆಯೋ ಆ ಯಾರೇ ಇತರ ವ್ಯಕ್ತಿಯೂ ಒಳಗೊಳ್ಳುತ್ತಾನೆ;

(ಎಫ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜಿ) "ನಿರ್ದಿಷ್ಟಪಡಿಸಿದ ಏಜೆನ್ಸಿ " ಎಂದರೆ,-

(i) ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ (1934ರ 2) ಮೇರೆಗೆ ರಚಿತವಾದ ಭಾರತೀಯ ರಿಸರ್ವ್ ಬ್ಯಾಂಕ್; ಅಥವಾ

(ii) ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955ರ (1955ರ 23) ಮೇರೆಗೆ ರಚಿತವಾದ ಭಾರತೀಯ ಸ್ಟೇಟ್ ಬ್ಯಾಂಕ್; ಅಥವಾ

* ದಿನಾಂಕ 01.09.1996 ರಿಂದ ಜಾರಿಗೆ ಬಂದಿದೆ. ನೋಡಿ: ಎಸ್.ಒ.603 (ಇ) ದಿನಾಂಕ: 29.08.1996

(iii) ಕೇಂದ್ರ ಸರ್ಕಾರವು ಈ ಕುರಿತು ನಿಯಮಿಸಬಹುದಾದಂತಹ ಇತರ ಬ್ಯಾಂಕ್ ಅಥವಾ ಸಂಸ್ಥೆ ;

(ಎಚ್) "ತಂತ್ರಜ್ಞಾನ" ಎಂದರೆ ಯಾವುದೇ ವಿದೇಶೀ ಸಹಯೋಗದ ಮೇರೆಗೆ ಕೈಗಾರಿಕಾ ಸಂಸ್ಥೆಗೆ ಯಾವುದೇ ಉದ್ದೇಶಕ್ಕಾಗಿ ಅಗತ್ಯವಿರುವಂಥ ಯಾವುದೇ ವಿಶೇಷ ಅಥವಾ ತಾಂತ್ರಿಕ ಜ್ಞಾನ ಅಥವಾ ಯಾವುದೇ ವಿಶೇಷ ಸೇವೆ, ಮತ್ತು ಇದು ವಿನ್ಯಾಸಗಳು, ರೇಖಾಚಿತ್ರಗಳು, ಪ್ರಕಟಣೆಗಳು ಹಾಗೂ ತಾಂತ್ರಿಕ ಸಿಬ್ಬಂದಿ ಇವುಗಳನ್ನು ಒಳಗೊಳ್ಳುತ್ತದೆ.

**3. ತಂತ್ರಜ್ಞಾನದ ಆಮದಿನ ಸಂಬಂಧದಲ್ಲಿ ಮಾಡಿದ ಸಂದಾಯದ ಮೇಲೆ ಉಪಕರವನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು.**- (1) ಈ ಅಧಿನಿಯಮದ ಉದ್ದೇಶಗಳಿಗಾಗಿ, ತಂತ್ರಜ್ಞಾನದ ಆಮದಿನ ಸಂಬಂಧದಲ್ಲಿ ಮಾಡಲಾದ ಎಲ್ಲ ಸಂದಾಯಗಳ ಮೇಲೆ ಶೇಕಡಾ ಐದರಷ್ಟಕ್ಕೆ ಮೀರದಂತೆ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ದರದಲ್ಲಿ ಉಪಕರವನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

(2) ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವ ಕೈಗಾರಿಕಾ ಸಂಸ್ಥೆಯು, ಅಂತಹ ಆಮದನ್ನು ಮಾಡಿಕೊಳ್ಳುವಲ್ಲಿ ಯಾವುದೇ ಸಂದಾಯಗಳನ್ನು ಮಾಡುವಾಗ ಅಥವಾ ಅದಕ್ಕೆ ಮುಂಚಿತವಾಗಿ, ಉಪಕರವನ್ನು ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಅದನ್ನು ಕೈಗಾರಿಕಾ ಸಂಸ್ಥೆಯು ನಿರ್ದಿಷ್ಟಪಡಿಸಲಾದ ಯಾವುದೇ ಏಜೆನ್ಸಿಗೆ ಸಂದಾಯ ಮಾಡತಕ್ಕದ್ದು.

**4. ಉಪಕರದಿಂದ ಬಂದ ಉತ್ಪತ್ತಿಯನ್ನು ಭಾರತದ ಸಂಚಿತ ನಿಧಿಗೆ ಜಮೆ ಮಾಡುವುದು.**- 3ನೆಯ ಪ್ರಕರಣದ ಮೇರೆಗೆ ವಿಧಿಸಲಾದ ಮತ್ತು ಸಂಗ್ರಹಿಸಲಾದ ಉಪಕರದ ಉತ್ಪತ್ತಿಯನ್ನು ಮೊದಲು ಭಾರತದ ಸಂಚಿತ ನಿಧಿಗೆ ಜಮೆ ಮಾಡತಕ್ಕದ್ದು, ಮತ್ತು ಕೇಂದ್ರ ಸರ್ಕಾರವು, ಒಂದು ವೇಳೆ ಸಂಸತ್ತು ಈ ಬಗ್ಗೆ ಕಾನೂನಿನ ಮೂಲಕ ವಿನಿಯೋಗಕ್ಕೆ ಉಪಬಂಧಿಸಿದ್ದರೆ, ಕಾಲಕಾಲಕ್ಕೆ ಮಂಡಲಿಗೆ ಅಂತಹ ಉತ್ಪತ್ತಿಗಳಿಂದ (ಸಂಗ್ರಹಣೆಯ ವೆಚ್ಚವನ್ನು ಕಳೆದುಕೊಂಡ ನಂತರ) ಮಂಡಲಿಯ ಉದ್ದೇಶಗಳಿಗಾಗಿ ಉಪಯೋಗಿಸಲು ಸೂಕ್ತವೆಂದು ಅದು ಭಾವಿಸಬಹುದಾದಂತಹ ಹಣದ ಮೊತ್ತವನ್ನು ಸಂದಾಯ ಮಾಡತಕ್ಕದ್ದು.

**5 ಮತ್ತು 6. [ಬಿಟ್ಟುಬಿಡಲಾಗಿದೆ.]**

**7. ವಿನಾಯಿತಿ ನೀಡಲು ಕೇಂದ್ರ ಸರ್ಕಾರದ ಅಧಿಕಾರ.**- ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿರಬಹುದಾದಂತಹ ಷರತ್ತುಗಳಿದ್ದರೆ ಅವುಗಳಿಗೆ ಒಳಪಟ್ಟು, ಅಂತಹ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ, ತಂತ್ರಜ್ಞಾನದ ಆಮದಿಗೆ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಉಪಕರವನ್ನು ಸಂದಾಯ ಮಾಡಲು ಯಾವುದೇ ಕೈಗಾರಿಕಾ ಸಂಸ್ಥೆಗೆ ವಿನಾಯಿತಿ ನೀಡುವುದು ಅವಶ್ಯವೆಂದು ಮನದಟ್ಟು ಮಾಡಿಕೊಂಡರೆ ಹಾಗೆ ವಿನಾಯಿತಿ ನೀಡಬಹುದು.

**8. ಮಾಹಿತಿಯನ್ನು ತರಿಸಿಕೊಳ್ಳಲು ಅಧಿಕಾರ.**- ಈ ಅಧಿನಿಯಮದ ಉದ್ದೇಶಗಳಿಗಾಗಿ ಮಂಡಲಿಯು, ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ಅಂತಹ ಅವಧಿಯೊಳಗೆ, ನಿಯಮಿಸಬಹುದಾದಂಥ ಅಂಕಿಅಂಶಗಳ ಮತ್ತು ಇತರ ಮಾಹಿತಿಯನ್ನು ಒದಗಿಸುವಂತೆ ಕೈಗಾರಿಕಾ ಸಂಸ್ಥೆಯನ್ನು ಅಗತ್ಯಪಡಿಸಬಹುದು.

**9. ಉಪಕರವನ್ನು ಸಂದಾಯ ಮಾಡದೇ ಇರುವುದಕ್ಕೆ ದಂಡ.**- (1) ಯಾವುದೇ ಉಪಕರವನ್ನು ಸಂದಾಯ ಮಾಡಬೇಕಾದ ಕೈಗಾರಿಕಾ ಸಂಸ್ಥೆಯು ತಂತ್ರಜ್ಞಾನದ ಆಮದಿಗಾಗಿ ಸಂದಾಯದ ಸಮಯದಲ್ಲಿ ಅಥವಾ ಅದಕ್ಕೆ ಮುಂಚಿತವಾಗಿ ಸಂದಾಯ ಮಾಡದೇ ಇದ್ದರೆ, ಅದನ್ನು ಸಂದಾಯ ಬಾಕಿ ಎಂಬುದಾಗಿ ಪರಿಗಣಿಸತಕ್ಕದ್ದು ಮತ್ತು ಅದನ್ನು ಮಂಡಲಿಯು ನಿಯಮಿಸಬಹುದಾದಂತಹ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

(2) ಮಂಡಲಿಯು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ, (1)ನೇ ಉಪಪ್ರಕರಣದ ಮೇರೆಗೆ ಸುಸ್ತಿದಾರನಾಗಿರುವ ಕೈಗಾರಿಕಾ ಸಂಸ್ಥೆಗೆ ಬಾಕಿ ಮೊತ್ತದ ಹತ್ತರಷ್ಟಕ್ಕೆ ಮೀರದ ಮೊಬಲಗಿನ ದಂಡವನ್ನು ವಿಧಿಸಬಹುದು:

ಪರಂತು, ಅಂತಹ ದಂಡವನ್ನು ವಿಧಿಸುವ ಮುಂಚೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಕೈಗಾರಿಕಾ ಸಂಸ್ಥೆಗೆ ಸೂಕ್ತ ಅವಕಾಶ ನೀಡತಕ್ಕದ್ದು ಮತ್ತು ಅಂತಹ ವಿಚಾರಣೆಯ ನಂತರ ಸುಸ್ತಿಗೆ, ಯಾವುದೇ ಯುಕ್ತ ಮತ್ತು ಸಾಕಷ್ಟು ಸಕಾರಣಗಳಿಂದ ಆಗಿದೆಯೆಂದು ಮಂಡಲಿಯು ಅಭಿಪ್ರಾಯಪಟ್ಟರೆ, ಈ ಉಪಪ್ರಕರಣದ ಮೇರೆಗೆ ಯಾವುದೇ ದಂಡವನ್ನು ವಿಧಿಸತಕ್ಕದ್ದಲ್ಲ.

**10. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸಿ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಕೆಳಕಂಡ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು.

(ಎ) 8ನೆಯ ಪ್ರಕರಣದ ಮೇರೆಗೆ ಮಾಹಿತಿಯನ್ನು ಒದಗಿಸಬೇಕಾದ ನಮೂನೆ ಮತ್ತು ಅವಧಿ ;

(ಬಿ) 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಉಪಕರದ ಬಾಕಿಯನ್ನು ವಸೂಲಿ ಮಾಡಬಹುದಾದ ವಿಧಾನ;

(ಸಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು, ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

* * *